252

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಲಕ್ಷ್ಮಣ , ಸಹಾಯಕ ಕೃಷಿ ಅಧಿಕಾರಿ (ನಿವೃತ್ತ) ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು

ಓದಲಾಗಿದೆ:-

1) ಅಪರ ನಿಂಬಂಧಕರು, ವಿಚಾರಣೆಗಳು-6 , ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಅ.ಸ.ಪಂ./ಕಂಪ್ಲೆಂಟ್/ಉಪಲೋಕ್/ಬಿ.ಜಿ.ಎಮ್. 2146/2012 ಎಆರ್‌ಇ -6 ದಿನಾಂಕ: 17-10-2012

ಪ್ರಸ್ತಾವನೆ:-

ಅಪರ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಲಕ್ಷ್ಮಣ ತಂದೆ ಜಟ್ಟೆಪ್ಪ ಪಟಗಾರ, ಹಿಂದಿನ ಸಹಾಯಕ ಕೃಷಿ ಅಧಿಕಾರಿ, (ಹಾಲಿ ನಿವೃತ್ತ) ಇವರು ಜಲಾನಯನ ಅಭಿವೃದ್ಧಿ ಇಲಾಖೆ, ಶಿರಸಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಫಿರ್ಯಾದಿದಾರರಾದ ಶ್ರೀ ಪ್ರಭು ಲಕ್ಕಪ್ಪ ಕ್ಯಾತಣ್ಣವರ್, ಸಾ: ರಂಗಾಪೂರ ಶಿರಸಿ ತಾಲ್ಲೂಕು ಇವರ ಅಣ್ಣನ ಮಗನಾದ ಶ್ರೀ ಮುರ್ಕಣ್ಣೆ ನಾಗರಾಜ್ ಕ್ಯಾತೆಣ್ಣನವರ್ ಇವರು 2011-12ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕ್ರೀಯಾ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಿದ್ದು, ಅವರ ಅಣ್ಣ 20 ವರ್ಷಗಳ ಹಿಂದೆ ಮೃತಪಟ್ಟಿದ್ದು, ಅಣ್ಣನ ಮಗ ಚಿಕ್ಕ ವಯಸ್ಸಿನವರಾಗಿದ್ದರಿಂದ, ಅವರ ಅಣ್ಣನ ಮಗನ (ಫಲಾನುಭವಿ) ಪರವಾಗಿ ಈ ಫಿರ್ಯಾದಿದಾರರೇ ಸದರಿ ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದು, ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ರೂ. 26,880/- ಹಾಗೂ ರೂ. 38,400/-ಗಳನ್ನು ಕೂಲಿಕಾರರಿಗೆ ಹಂಚುವ ಸಲುವಾಗಿ ಬ್ಯಾಂಕಿಗೆ ಜಮಾ ಮಾಡಿದ್ದು, ಈ ಸಂಬಂಧದಲ್ಲಿ ಶಿರಸಿಯ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಯಾಗಿ ಜಲಾನಯನ ಅಭಿವೃದ್ಧಿ ಇಲಾಖೆ, ಶಿರಸಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಲ್.ಜಿ. ಪಟಗಾರ ಇವರು ಫಿರ್ಯಾದಿದಾರರಿಂದ ಅಕ್ರಮವಾಗಿ ರೂ. 3,000/-ಗಳನ್ನು ಲಂಚ ರೂಪವಾಗಿ ಪಡೆದು ನಂತರ ಇನ್ನೂ ಕೆಲವು ಹಣವನ್ನು ಫಲಾನುಭವಿಗಳ ಖಾತೆಗೆ ಜಮ ಮಾಡಲು ಇನ್ನೂ ರೂ. 3,000/- ಲಂಚ ಕೇಳಿದ್ದು, ದಿನಾಂಕ: 17-08-2011 ರಂದು ಫಿರ್ಯಾಧಿದಾರರಿಂದ ರೂ. 3,000/- ಲಂಚ

--2--

ಪಡೆಯುತ್ತಿದ್ದಾಗ ಲೋಕಾಯುಕ್ತರ ಬಲೆಗೆ ಬಿದ್ದಿರುತ್ತಾರೆ. ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ಕಾಂಡಕ್ಟ್) ನಿಯಮ 3(1)ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ (prima-facie) ಕಂಡು ಬಂದಿರುತ್ತದೆಂದು, ಹಾಗೂ ಈ ಪ್ರಕರಣದಲ್ಲಿ ಸಂಗ್ರಹಿಸಲಾದ ದಾಖಲೆಗಳನ್ನು ಹಾಗೂ ಸಾಕ್ಷಿಗಳ ಹೇಳಿಕೆಯನ್ನು ಪರಿಶೀಲಿಸಿದಾಗ. ಪ್ರಕರಣದಲ್ಲಿ ಆರೋಪಿತ ಅಧಿಕಾರಿಯವರಾದ ಶ್ರೀ ಲಕ್ಷ್ಮಣ ಜಟ್ಟಪ್ಪ ಪಟಗಾರ, ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರರಾಗಿದ್ದು, ಸರ್ಕಾರದ ಮೌಲ್ಯಗಳನ್ನು ಕಾಪಾಡುವಲ್ಲಿ ವಿಫಲರಾಗಿದ್ದು, ಸಾರ್ವಜನಿಕರಿಗೆ ಸರ್ಕಾರಿ ಕೆಲಸ ಮಾಡಲು ಅವರಿಂದ ಅಕ್ರಮವಾಗಿ ಲಂಚ ಪಡೆದು, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿದ್ದು ಈ ಬಗ್ಗೆ ನೌಕರರ ವಿರುದ್ಧದ ದುರ್ನಡತೆಗಾಗಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎಂಬುದಕ್ಕೆ ಆರೋಪಿತ ಅಧಿಕಾರಿಯವರಿಂದ ಸಮಜಾಯಿಸಿಯನ್ನು ಕೇಳಲಾಗಿ, ಆರೋಪಿ ಅಧಿಕಾರಿಯವರು ಉತ್ತರವನ್ನು ನೀಡಿದ್ದು, ಸದರಿ ಉತ್ತರವು, ಪ್ರಕರಣವನ್ನು ಕೈಬಿಡಲು ಸಮಂಜಸವಾಗಿರುವುದಿಲ್ಲವೆಂದು ತಿಳಿಸಿ, ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿ 1966 ರ ಸೆಕ್ಷನ್ ನಿಯಮ 3(1) ರ ಪ್ರಕಾರ ತಪ್ಪೆಸಗಿದ್ದಾರೆಂಬುದು ಸಹ ಕಂಡು ಬಂದಿರುವುದಾಗಿ ತಿಳಿಸಿ ಗೌರವಾನ್ವಿತ ಉಪ-ಲೋಕಾಯುಕ್ತರು-1 ಇವರು ವರದಿಯನ್ನು ಲಗತ್ತಿಸಿ, ಸದರಿ ಅಧಿಕಾರಿಯವರ ವಿರುದ್ಧ ಶಿಸ್ತು ಕ್ರಮ ಆಯೋಜಿಸಲು ಸದರಿ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 14-A ರನ್ವಯ ಪ್ರಕರಣವನ್ನು ಗೌರವಾನ್ವಿತ ಉಪ-ಲೋಕಾಯುಕ್ತರುರವರಿಗೆ ವಹಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಶ್ರೀ ಲಕ್ಷ್ಮಣ ಜಟ್ಟೆಪ್ಪ ಪಟಗಾರ ಅಂದಿನ ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ (ಹಾಲಿ ನಿವೃತ್ತ), ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2)(b)((1)ರನ್ವಯ ಇವರ ವಿರುದ್ಧ ವಿಚಾರಣಾ ಕ್ರಮ ಆಯೋಜಿಸಲು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 14-A ರನ್ವಯ ಪ್ರಕರಣವನ್ನು

ಗೌರವಾನ್ವಿತ ಉಪ- ಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲು ನಿರ್ಧರಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂ. ಕೃಇ 74 ಕೃಪವಿ 2012,**
**ಬೆಂಗಳೂರು, ದಿನಾಂಕ: 11ನೇ ಪೆಬ್ರವರಿ 2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಲಕ್ಷ್ಮಣ ಜಟ್ಟೆಪ್ಪ ಪಟಗಾರ ಅಂದಿನ ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ (ಹಾಲಿ ನಿವೃತ್ತ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2)(b)((1)ರನ್ವಯ ಇವರ ವಿರುದ್ಧ ಶಿಸ್ತು ಕ್ರಮ ಆಯೋಜಿಸಲು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 14(ಎ)ರನ್ವಯ ಪ್ರಕರಣವನ್ನು ಗೌರವಾನ್ವಿತ ಉಪ-ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ,**

**ಗೌರವಾನ್ವಿತ ಉಪ-ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.**

**ಪ್ರತಿಯನ್ನು,**

1) ಮಹಾಲೇಖಪಾಲರು, (ಅಕೌಂಟ್ಸ್ ಅಫೀಸರ್ ಜಿ-5,ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ, ಬೆಂಗಳೂರು.
2) ಅಪರ ನಿಬಂಧಕರು, ವಿಚಾರಣೆಗಳು-6 , ಕರ್ನಾಟಕ ಲೋಕಾಯುಕ್ತ ಬೆಂಗಳೂರು
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಕಾವೇರಿ ಭವನ, ಬೆಂಗಳೂರು.
4) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
5) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಉತ್ತರ ಕನ್ನಡ ಜಿಲ್ಲೆ, ಉತ್ತರ ಕನ್ನಡ .
6) ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಉತ್ತರ ಕನ್ನಡ ಜಿಲ್ಲೆ, ಉತ್ತರ ಕನ್ನಡ.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರಿಗೆ.
8) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರಿಗೆ.
9) ಸರ್ಕಾರದ ಅಧೀನ ಕಾರ್ಯದರ್ಶಿ ಜಲಸಂಪನ್ಮೂಲ ಇಲಾಖೆ (ಅ.ಟಿ ಸಂಖ್ಯೆ:ಜಸಂಇ:176:ಸೇಅವಿ:12 ದಿ02-11-2012ರನ್ವಯ)
10) ಸಂಬಂಧಪಟ್ಟ ಅಧಿಕಾರಿಯವರಿಗೆ, (ಜಲಾನಯನ ಅಭಿವೃದ್ಧಿ ಆಯುಕ್ತರ ಮೂಲಕ)
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.